ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು
ಕಾರ್ಮಿಕರ ಕಲ್ಯಾಣ ನಿಧಿ ಬಗ್ಗೆ

೭೨೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಕಾರ್ಮಿಕರಿಂದ ಒಟ್ಟು ತಲಾ ರೂಪಾಯಿ ಳರಂತೆ ಕಾರ್ಮಿಕ ಕಲ್ಯಾಣ ನಿಧಿಗೆ ನಾನಾತರದ ಕಾರ್ಖಾನೆ ಹಾಗೂ ಸಂಸ್ಥೆಗಳಿಂದ ವಸೂಲಾದ ಹಣ ಎಷ್ಟು ?

೨. ಈ ಕಲ್ಯಾಣ ನಿಧಿಯಿಂದ ಕಾರ್ಮಿಕರಿಗೆ ಇದುವರೆವಿಗೂ ಪರಿಹಾರ ಕೊಟ್ಟಿರತಕ್ಕ ಹಣ ವೆಷ್ಟು ? ಹಾಗೂ ಯಾವ ಯಾವ ಬಾಬುಗಳಿಗೆ ಎಷ್ಟು ಕೊಡಲಾಗಿದೆ ?

೩. ಅಯಾಯ ಕಾರ್ಖಾನೆಗಳಿಂದ ಕಲ್ಯಾಣ ನಿಧಿಯಲ್ಲಿ ಜಮೆಯಾಗಿರತಕ್ಕ ಹಣವನ್ನು ಕಾರ್ಮಿಕರ ಕುಟುಂಬಗಳಿಗೆ ವೈದ್ಯಾಪ್ಯ ವೇತನ ಮರಣ ಫಂಡ್ (ಡೆತ್‌ರಿಲೀಫ್) ಕ್ಯಾನ್ಸರ್. ಟಿ. ಬಿ. ರೋಗಿಗಳಿಗೆ ಕೊಡಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈ ಕೊಳ್ಳುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—

೧. ಕಾರ್ಮಿಕರಿಂದ ಮಾಲೀಕರಿಂದ ಹಾಗೂ ರಾಜ್ಯ ಸರ್ಕಾರದ ಆಂಶದಾನ ಕ್ರಮವಾಗಿ ರೂ. ೧: ೨; ೧ ರಂತೆ ಇಲ್ಲಿಯವರೆಗೆ ವಸೂಲು ಮಾಡಲ್ಪಟ್ಟ ಕಲ್ಯಾಣ ನಿಧಿಯ ಮೊತ್ತ ರೂ. ೧, ೮೦, ೧೮, ೧೪೧–೨೭.

೨. ೧೯೮೧–೮೨ ರಿಂದ ೧೯೮೬–೮೭ರವರೆಗೆ ಕಾರ್ಮಿಕರ ಮಕ್ಕಳಿಗಾಗಿ ವಿದ್ಯಾರ್ಥಿ ಯೋಜನೆಯಲ್ಲಿ ಸುಮಾರು ರೂ. ೧೯,೬೮, ೭೭೫–೦೦ ಖರ್ಚು ಮಾಡಿದೆ.

೩. ಇಲ್ಲ. ವಿಶೇಷ ಸಂದರ್ಭ ಬಂದಲ್ಲಿ ಮಂಡಳಿಯು ಮುಂದೆ ಮುಂಡಿಸಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

(ಶ್ರೀ ಕೆ. ಕುಶಾಲ ಅವರ ಪ್ರಶ್ನೆಯನ್ನು ಶ್ರೀ ಬಿ. ಎಂ. ಇದಿನಬ್ಬ ಅವರು ಕೇಳಿದರು)

ಶ್ರೀ ಬಿ. ಎಂ. ಇದಿನಬ್ಬ.—ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಮತ್ತು ಪುತ್ತೂರು ತಾಲ್ಲೂಕಿನ ಕರ್ನಾಟಕ ರಬ್ಬರು ಪ್ಲಾಂಟೇಷನ್‌ನಲ್ಲಿ ದುಡಿಯುತ್ತಿರುವ ಕೃಷಿ ಕಾರ್ಮಿಕರು ಬಹಳ ಸಂಖ್ಯೆಯಲ್ಲಿ ಇದ್ದಾರೆ, ಆದರೆ ಅವರಿಗೆ ವಾಸ್ತವ್ಯ ಮಾಡಲು ಮನೆ ಮತ್ತು ಇತರೇ ಸೌಲಭ್ಯಗಳ ಬಗ್ಗೆ ಕೇಳಿದ್ದಕ್ಕೆ ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಈ ಕೃಷಿ ಕಾರ್ಮಿಕರಿಗೆ ಎಲ್ಲ ರೀತಿಯ ಸೌಲಭ್ಯ ಕೊಡಲಿಕ್ಕೆ ಏನಾದರು ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಜನತಾ ಮನೆಗಳ ಯೋಜನೆ ಯಡಿಯಲ್ಲಿ ಇವರಿಗೆ ಮನೆಗಳನ್ನು ಕಟ್ಟಿಕೊಡತಕ್ಕ ವ್ಯವಸ್ಥೆ ಇದೆ. ಆದ್ದರಿಂದ ಆ ಯೋಜನೆಯ ಅಡಿಯಲ್ಲಿ ಅರ್ಜಿ ಹಾಕಿಕೊಂಡರೆಅವರಿಗೂ ಸಹ ಮನೆಗಳನ್ನು ಕೊಡುತ್ತೇವೆ

ಪ್ರಶ್ನೆ ೭೦೬ ಸದಸ್ಯರು ಗೈರು ಹಾಜರು

ಪ್ರಶ್ನೆ ೭೪೫ ಸದಸ್ಯರು ಗೈರು ಹಾಜರು

ಹುಂಡೇಕರ್ ಸಮಿತಿಯ ವರದಿ

೭೫೫. ಶ್ರೀ ವಿಶ್ವನಾಥಪಾಟೀಲ್ ಹೆಬ್ಬಾಳ.—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕಾ ಹಾಗೂ ಜಿಲ್ಲಾ ಪುನರ್ವಿಂಗಡಣೆಗಾಗಿ ನೇಮಿಸಲಾದ ಹುಂಡೇಕರ್ ಸಮಿತಿಯವರು ತಮ್ಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದಾರೆಯೇ ?